**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**Crl.Misc. 708/2023**

| | | | |
|---|---|---|---|
| ಹೆಸರು | : | ಗಣಪತಿ | **RW-1** |
| ತಂದೆಯ ಹೆಸರು | : | ಧರ್ಮರಾವ್ | ದಿನಾಂಕ : **19-11-2025.** |
| ವಯಸ್ಸು | : | 35 ವರ್ಷ | |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ನರನಾಳ . | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರರ ಪರವಾಗಿ ಶ್ರೀ SSM ವಕೀಲರಿಂದಃ**

ನನ್ನ ಮದುವೆ ಅರ್ಜಿದಾರರೊಂದಿಗೆ ದಿನಾಂಕ 23-03-2019ರಂದು ಆಗಿರುತ್ತದೆ. ಮದುವೆ ಸಮಯಕ್ಕೆ ನಾನು ಯಾವುದೇ ಹಣ ಅಥವಾ ಒಡವೆ ಅರ್ಜಿದಾರರಿಂದ ಪಡೆದಿಲ್ಲ. ಮದುವೆಯಾದ ಅರ್ಜಿದಾರಳು ಒಂದು ತಿಂಗಳು ಉಳಿದು ಕೊಂಡು ಯಾವುದೇ ಕಾರಣವಿಲ್ಲದೇ ಅರ್ಜಿದಾರಳು ಸಹೋದರ ಮಾವನ ಮನೆಯಲ್ಲಿ ಉಳಿದುಕೊಂಡು ಅಲ್ಲಿಂದ ರಾಮತೀರ್ಥಕ್ಕೆ ನನ್ನ ಅತ್ತೆ ಮಾವನ ಮನೆಗೆ ಹೋಗಿರುತ್ತಾಳೆ.

ನನ್ನ ಹೆಸರಿನಲ್ಲಿ ನರನಾಳ ಗ್ರಾಮದಲ್ಲಿ 2 ಎಕರೆ ಜಮೀನು ಇದೆ ಅರ್ಜಿದಾರಳು ಸದರಿ ಜಮೀನು ತನ್ನ ಹೆಸರಿಗೆ ಮಾಡಿದರೇ ಮಾತ್ರ ನನ್ನ ಜೊತೆ ಬರುತ್ತೇನೆ ಎಂದು ಹೇಳಿರುತ್ತಾರೆ. ನಾನು 5 ರಿಂದ 6 ಬಾರಿ ಅರ್ಜಿದಾರರಿಗೆ ಕರೆಯಲು ಹೋದರು ಸಹ ಅವರು ನನ್ನ ಜೊತೆ ಬಂದಿರುವುದಿಲ್ಲ. ಈಗಲೂ ನಾನು ಅರ್ಜಿದಾರರಿಗೆ ಕರೆದುಕೊಂಡು ಹೋಗಲು ತಯಾರಿದಿದ್ದೇನೆ.

ನಾನು 7ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಬೇರೆ ಅವರ ಹೊಲದಲ್ಲಿ ಕೆಲಸ ಮಾಡುತ್ತೇನೆ. ನಾನು ಪ್ರತಿ ತಿಂಗಳು 2 ರಿಂದ 3 ಸಾವಿರ ಸಂಪಾದನೆ ಮಾಡುತ್ತೇನೆ. ಸದರಿ 2 ಎಕರೆ ಜಮೀನಿನಲ್ಲಿ ಹಸಿರು ಮತ್ತು ತೊಗರೆ ಬೆಳೆ ಬೆಳೆದಿರುತ್ತೇನೆ ಆದರೆ ಜಾಸ್ತಿ ಮಳೆಯಾದ ಕಾರಣ ಬೆಳೆ ಬಂದಿರುವುದಿಲ್ಲ. ಈಗ ನರನಾಳದಲ್ಲಿರುವ ನನ್ನ ತಂದೆಯ ಹೆಸರಿನಲ್ಲಿರುವ ಮನೆಯಲ್ಲಿ ನಾನು ವಾಸವಿದ್ದೇನೆ. ಈಗ ನನ್ನ ಮನೆಯಲ್ಲಿ ನಾನು ನನ್ನ ತಂದೆ ತಾಯಿ ಜೊತೆ ವಾಸವಿದ್ದೇನೆ.

ನನ್ನ ಹೆಂಡತಿ ಅರ್ಜಿದಾರಳು ಪಿ.ಯು.ಸಿ. 2ನೇ ವರ್ಷದವರೆಗೆ ವಿದ್ಯಾಭ್ಯಾಸ ಮಾಡಿದ್ದೇರೆ. ಅರ್ಜಿದಾರಳು ಬಟ್ಟೆ ಹೊಲೆಯುವ ಕೆಲಸ ಮಾಡುತ್ತಾರೆ. ಅರ್ಜಿದಾರಳು ಪ್ರತಿ ತಿಂಗಳು 10 ರಿಂದ 15 ಸಾವಿರ ಸಂಪಾದನೆ ಮಾಡುತ್ತಾರೆ. ಅರ್ಜಿದಾರಳ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ.

**ವಾಟೀ ಸವಾಲು ಅರ್ಜಿದಾರಳ ಪರವಾಗಿ ಶ್ರೀ CGM ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**